ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ: 76/2024**

ಪ್ರ.ವ.ಬೋ.ತಾಃ 05-11-2025

ಚಾಸಾಃ 2 ಫಾಸಾಃ 2

| | |
|---|---|
| ಸಾಕ್ಷಿಯ ಹೆಸರು | ಅಶ್ವತ್ಥಪ್ಪ |
| ತಂದೆ/ಗಂಡನ ಹೆಸರು | ರಾಮಯ್ಯ |
| ವಯಸ್ಸು | 51 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ಹುಣಸವಾಡಿ, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

1 ನೇ ಆರೋಪಿ ನನ್ನ ಅಣ್ಣ, 2 ಮತ್ತು 3 ನೇ ಆರೋಪಿತರು ನನ್ನ ಅಣ್ಣನ ಮಕ್ಕಳುಗಳು, 4 ನೇ ಆರೋಪಿ ನನ್ನ ಅತ್ತಿಗೆ, 5 ನೇ ಆರೋಪಿ ಸಂಬಂಧಿಕರು. ಚಾಸಾ.1 ನನ್ನ ತಮ್ಮ. ಚಾಸಾ.3 ನನ್ನ ನಾದಿನಿ. ಚಾಸಾ.4 ನನ್ನ ತಂಗಿ. ಉಳಿದ ಸಾಕ್ಷಿದಾರರು ಗೊತ್ತು. ನನ್ನ ತಂದೆಯವರು ಬದುಕಿದ್ದಾಗ ಸರ್ವೆ ನಂಬರ್ 86/5 ರ ಆಸ್ತಿಯನ್ನು ಎಲ್ಲರೂ ವಿಭಾಗ ಮಾಡಿಕೊಳ್ಳಿ ಎಂದು ಹೇಳಿ 1 ನೇ ಆರೋಪಿಯ ಹೆಸರಿಗೆ ಮಾಡಿಕೊಟ್ಟಿದ್ದರು. ಆ ಸಮಯದಲ್ಲಿ 1 ನೇ ಆರೋಪಿಯು ಸಹ ಆ ಜಮೀನನ್ನು ಮಾರಾಟ ಮಾಡಿ ಎಲ್ಲರಿಗೂ ಹಣ ಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದರು. ದಿಃ30.04.2024 ರಂದು ಮಧ್ಯಾಹ್ನ 1.30 ಗಂಟೆ ಸಮಯದಲ್ಲಿ 1 ನೇ ಆರೋಪಿ ಹಣ ಕೊಡುತ್ತೇನೆ ಎಂದು ಹೇಳಿ ನನ್ನ ಮತ್ತು

ಚಾಸಾ.1 ರವರನ್ನು ಜಮೀನಿನ ಬಳಿ ಕರೆಸಿದ್ದರು. ಆ ಸಮಯದಲ್ಲಿ 1 ನೇ ಆರೋಪಿ ಹಣ ಕೊಡುವುದಿಲ್ಲ ಎಂದು ಹೇಳಿ ಬೇವಿನ ಚಕ್ಕೆಯಿಂದ ನನ್ನ ತಲೆಗೆ ಹಲ್ಲೆ ಮಾಡಿದರು. ನಂತರ 2 ನೇ ಆರೋಪಿ ಮಚ್ಚಿನಿಂದ ನನ್ನ ಎಡಗೈಗೆ ಹಲ್ಲೆ ಮಾಡಿದರು. 3 ಮತ್ತು 5 ನೇ ಆರೋಪಿತರು ನನಗೆ ದೊಣ್ಣೆಯಿಂದ ಹಲ್ಲೆ ಮಾಡಿದರು. ಗಲಾಟೆ ಬಿಡಿಸಲು ಬಂದ ಚಾಸಾ.1, 3 ಮತ್ತು 4 ರವರಿಗೆ ಆರೋಪಿತರು ಹಲ್ಲೆ ಮಾಡಿದರು. ಆಗ ನಾನು ಜ್ಞಾನ ತಪ್ಪಿ ಬಿದ್ದೆನು. ಆನಂತರ ನನ್ನನ್ನು ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುದಕೊಂಡು ಹೋದರು. ಆನಂತರ ಹೆಚ್ಚಿನ ಚಿಕಿತ್ಸೆಗಾಗಿ ತುಮಕೂರಿನ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋದರು. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ಆ ದಿನ ಆರೋಪಿತರುಹಲ್ಲೆಗೆ ಬಳಸಿದ ಚಕ್ಕೆ, ದೊಣ್ಣೆ ಮತ್ತು ಮಚ್ಚನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಮು.ಮಾ.01 ರಿಂದ 03 ಎಂದು ಈಗಾಗಲೇ ಗುರುತಿಸಲಾಗಿದೆ. ಆ ದಿನ ಹಲ್ಲೆ ಮಾಡಿದ ವ್ಯಕ್ತಿಗಳು ಈ ದಿನ ನ್ಯಾಯಾಲಯದ ಮುಂದಿರುವ ವ್ಯಕ್ತಿಗಳಾಗಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸಸಅ ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ. ರವರಿಂದಃ-**

ಆ ದಿನ ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ ಸರ್ವೇ ನಂ.86/5 ರ ಜಮೀನಿನ ಮಾರಾಟದ ಹಣವನ್ನು ಕೊಡುತ್ತೇನೆ ಎಂದು ಹೇಳಿ 1 ನೇ ಆರೋಪಿ ನಮ್ಮನ್ನು ಕರೆದಿದ್ದರು

ಎಂದರೆ ಸರಿ. ಆ ಸಮಯದಲ್ಲಿ 1 ನೇ ಆರೋಪಿ ನನಗೆ ಅವಾಚ್ಯ ಶಬ್ದಗಳಿಂದ ಬೈದು ಗಲಾಟೆ ಮಾಡಿದರು ಎಂದರೆ ಸರಿ. ಗಲಾಟೆ ಬಿಡಿಸಲು ಬಂದ ಚಾಸಾ.1 ರವರಿಗ 3 ನೇ ಆರೋಪಿ ಹಲ್ಲೆ ಮಾಡಿದರು ಎಂದರೆ ಸರಿ. 4 ನೇ ಆರೋಪಿ ಚಾಸಾ.4 ರವರ ಮೈಕೈಗೆ ಹೊಡೆದು, ಜುಟ್ಟು ಹಿಡಿದು ಎಳೆದಾಡಿದರು ಎಂದರೆ ಸರಿ. 1 ಮತ್ತು 2 ನೇ ಆರೋಪಿತರು ಚಾಸಾ.3 ರವರ ಮೈಕೈಗೆ ಹೊಡೆದು ಜುಟ್ಟು ಹಿಡಿದು ಎಳೆದಾಡಿದರು ಎಂದರೆ ಸರಿ. ಈ ಗಲಾಟೆಯನ್ನು ಚಾಸಾ.5 ರಿಂದ 7 ರವರು ಬಿಡಿಸಿದರು ಎಂದರೆ ಸರಿ. ಈ ಜಮೀನಿನಲ್ಲಿ ಭಾಗ ಕೇಳಿದರೆ ನಿಮ್ಮನ್ನು ಜೀವ ಸಹಿತ ಉಳಿಸುವುದಿಲ್ಲ ಎಂದು ಆರೋಪಿತರು ಜೀವ ಬೆದರಿಕೆ ಹಾಕಿದರು ಎಂದರೆ ಸರಿ.

**ಪಾಟೀ ಸವಾಲುಃ- ಆರೋಪಿತರ ಪರವಾಗಿ ಶ್ರೀ. ಪಿ.ಸಿ.ಕೆ.ಆರ್. ವಕೀಲರಿಂದಃ-**

ಈ ಗಲಾಟೆ ಆಗುವುದಕ್ಕೂ ಮೊದಲು ವಿಲ್ ನ ವಿಚಾರವಾಗಿ ನಾವು ಆರೋಪಿತರ ವಿರುದ್ಧ ಮಾನ್ಯ 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಧುಗಿರಿಯಲ್ಲಿ ಅಸಲು ದಾವಾ ಸಂಖ್ಯೆ 5006/2024 ರಂತೆ ದಾವೆ ಹಾಕಿದ್ದೆವು ಎಂದರೆ ಸರಿ. ಆ ದಾವೆ ವಜಾ ಆಗಿದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾವುಗಳು ಆರೋಪಿತರ ಮನೆಯ ಬಳಿ ಹೋಗಿ ಗಲಾಟೆ ಮಾಡಿದೆವು ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ.1 ರವರು ಕೂಡಿಕೊಂಡು ವಿಲ್ಲನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 86/5 ರ ಆಸ್ತಿಯಲ್ಲಿ ಭಾಗ ಆಗಿರುವುದಿಲ್ಲ. ಈ ಬಗ್ಗೆ ವಿಭಾಗ ಪತ್ರ ಉಪನೊಂದಣಾಧಿಕಾರಿಗಳ

ಕಚೇರಿಯಲ್ಲಿ ನೊಂದಣಿ ಆಗಿರುತ್ತದೆ ಎಂದರೆ, ಸಾಕ್ಷಿಯು ಈ ಆಸ್ತಿಯಲ್ಲಿ ವಿಭಾಗ ಆಗಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಆ ವಿಭಾಗ ಪತ್ರವನ್ನು ನಾನೇ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಆ ವಿಭಾಗ ಪತ್ರದಂತೆ ಖಾತಾ ಬದಲಾವಣೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 86/5 ರ ಆಸ್ತಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆ ದಿನ ಆರೋಪಿತರು ಆ ಸ್ಥಳಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ. ಆ ದಿನ ಬೆಳಗ್ಗೆ 10.00 ಗಂಟೆ ಸಮಯದಿಂದಲೂ ಸಹ ಆ ಸ್ಥಳದಲ್ಲಿ ಇದ್ದೆನು. ಆ ಜಮೀನನ್ನು ಜನವರಿ ತಿಂಗಳಿನಲ್ಲಿಯೇ ಮಾರಾಟ ಮಾಡಿದ್ದರು. ಆ ಜಮೀನನ್ನು 1 ನೇ ಆರೋಪಿ 36 ಲಕ್ಷಕ್ಕೆ ಮಾರಾಟ ಮಾಡಿದ್ದರು. ಈ ವಿಚಾರ ನನಗೆ ಫೋನ್ ಮೂಲಕ ಗೊತ್ತಾಯಿತು. ಈ ರೀತಿ ಮಾರಾಟ ಮಾಡುತ್ತಿರುವ ವಿಚಾರ ನನಗೆ ಗೊತ್ತಿರುವುದಿಲ್ಲ.

ನಾನು ಚಿಕ್ಕನಾಯಕನಹಳ್ಳಿಯ ಗೋಪಾಲಪುರ ಮತ್ತು ಹುಣಸೇವಾಡಿ ಗ್ರಾಮದಲ್ಲಿ ವಾಸವಾಗಿರುತ್ತೇನೆ. ಆರೋಪಿತರು ಕಳೆದ 30 ವರ್ಷಗಳಿಂದಲೂ ಸಹ ದೊಡ್ಡಚೇಮೇನಹಳ್ಳಿಯಲ್ಲಿ ವಾಸವಾಗಿರುತ್ತಾರೆ. ಆ ಗಲಾಟೆ ಮಧ್ಯಾಹ್ನ 1.30 ಗಂಟೆಯಿಂದ 3.00 ಗಂಟೆಯವರೆಗೆ ನಡೆಯಿತು. ಆ ಜಮೀನು ಹುಣಸೇವಾಡಿ ಗ್ರಾಮದಿಂದ 1 ಕಿ.ಮೀ. ದೂರದಲ್ಲಿದೆ. ಚಾಸಾ.7 ರವರು ರಾಜಕೀಯ ವ್ಯಕ್ತಿಗಳು. ಆರೋಪಿತರು ಹಲ್ಲೆ ಮಾಡಿದ ಕಾರಣ ಸುಮಾರು 3 ರಿಂದ 4 ಲೀಟರ್ ರಕ್ತ ಹೋಗಿರುತ್ತದೆ. ಆ ರಕ್ತ ನನ್ನ ಷರ್ಟ್ ಮತ್ತು ಬನಿಯನ್ ಗೆ ಆಗಿತ್ತು. ಆ ದಿನ ನನಗೆ ಮಧ್ಯಾಹ್ನ 3.00 ಗಂಟೆಗೆ ಜ್ಞಾನ ತಪ್ಪಿತ್ತು. ನನಗೆ ಆಸ್ಪತ್ರೆಗೆ ಸೇರಿದ ಒಂದೂವರೆ ದಿನದ ನಂತರ ಪ್ರಜ್ಞೆ ಬಂತು. ಆನಂತರ

ನನಗೆ ಏನಾಯಿತು ಎಂಬುದು ನನಗೆ ಗೊತ್ತಿಲ್ಲ. ಹುಣಸೇವಾಡಿಯಿಂದ ಕೊಡಿಗೇನಹಳ್ಳಿ 8 ಕಿ.ಮೀ. ದೂರದಲ್ಲಿದೆ. ಕೊಡಿಗೇನಹಳ್ಳಿಯಲ್ಲಿ ಸರ್ಕಾರಿ ಆಸ್ಪತ್ರೆ ಇದೆ. ಕೊಂಡವಾಡಿ ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆ ಇದೆ. ನನಗೆ ಹೆಚ್ಚಿನ ಗಾಯಗಳಾದ ಕಾರಣ ನನ್ನನ್ನು ಮಧುಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆನಂತರ ಮಧುಗಿರಿ ಆಸ್ಪತ್ರೆಗೆ ಬಂದೆನು ಎಂಬುದು ನನಗೆ ಪ್ರಜ್ಞೆ ತಪ್ಪಿದ ಕಾರಣ ನನಗೆ ಗೊತ್ತಿಲ್ಲ. ಆ ದಿನ ನನಗೆ ಯಾವುದೇ ಪ್ರಜ್ಞೆ ತಪ್ಪಿರಲಿಲ್ಲ, ನಾನು ಮತ್ತು ಚಾಸಾ.1 ರವರು ಸೇರಿಕೊಂಡು ಈ ಸುಳ್ಳು ದೂರನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಆಸ್ಪತ್ರೆಯಲ್ಲಿ ಹೇಳಿಕೆ ನೀಡಿರುತ್ತೇನೆ. ಆನಂತರ ಪೊಲೀಸ್ ಠಾಣೆಯಲ್ಲಿಯೂ ಸಹ ನನ್ನ ಹೇಳಿಕೆ ಪಡೆದರು.

ನಾನು ಈ ಹಿಂದೆಯೇ ಗಾಯಪಡಿಸಿಕೊಂಡು ಈ ಕೇಸಿಗೋಸ್ಕರ ಆರೋಪಿತರು ಹಲ್ಲೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನಾನು ಯಾವುದೇ ಕೆಲಸ ಮಾಡಲು ಸಾಧ್ಯವಿರುವುದಿಲ್ಲ. ಈಗಲೂ ಸಹ ಪಂಕ್ಚರ್ ಹಾಕುವ ಕೆಲಸ ಮತ್ತ ಟೈಲರಿಂಗ್ ಕೆಲಸ ಮಾಡುತ್ತಿದೇನೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ.1 ರವರು ಹಾಗೂ ಚಾಸಾ.7 ರವರು ಜೊತೆಯಾಗಿ ಆರೋಪಿತರಿಂದ ಹಣ ಪಡೆಯುವ ಉದ್ದೇಶದಿಂದ ಈ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಆ ದಿನ ಮೂ.ಮಾ.01 ರಿಂದ 03 ರಂತಹ ವಸ್ತುಗಳಿಂದ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ಆ ಜಮೀನಿನಲ್ಲಿ ನನಗಾಗಲೀ ಅಥವಾ ನನ್ನ ಮಕ್ಕಳಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u>– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ